**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕುಣಿಗಲ್**

**ಉಪಸ್ಥಿತರುಃ**

**ಶ್ರೀಮತಿ ಸುಜಾತ ಎ.ಬಿ.**

**ಬಿ.ಎ.ಎಲ್, ಎಲ್.ಎಲ್.ಬಿ,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ, ಕುಣಿಗಲ್.**

**ಸಿ.ಸಿ.ನಂ.7797/2023**

ಪಿರ್ಯಾದುದಾರರುಃ ಶ್ರೀಮತಿ ಭಾಗ್ಯ ಕೆ
ಕೋಂ ಲೇಟ್ ಗೋಪಾಲ್ ,
ವಯಸ್ಸು 36 ವರ್ಷ ,
ವಾಸಃ ಕಾಡುಮತ್ತಿಕೆರೆ ಗ್ರಾಮ ,
ಕಸಬ ಹೋಬಳಿ, ಕುಣಿಗಲ್ ತಾಲ್ಲೂಕು,
ಈಗ ವಾಸಃ ಯೋಗ ಮಂದಿರದ ಹತ್ತಿರ,
ಪತಂಜಲಿ ನಗರ ,ಕುಣಿಗಲ್ ಟೌನ್.

**ವಿರುದ್ಧ**

ಆರೋಪಿ : ವೀರಣ್ಣಗೌಡ ವೈ.ಹೆಚ್
ಶಿಕ್ಷಕರು, ಉರ್ದು ಶಾಲೆ, ಬಿದನಗೆರೆ ,
ವಾರ್ಡ್ ನಂ.1, ಕುಣಿಗಲ್ ಟೌನ್,
ವಾಸಃ ಶ್ರೀ ಅಂಜನೆಯಸ್ವಾಮಿ ದೇವಸ್ಥಾನದ ರಸ್ತೆ,
ಕೆ.ಆರ್.ಎಸ್. ಅಗ್ರಹಾರ , ಕುಣಿಗಲ್ ಟೌನ್ ,
ತುಮಕೂರು .

**ಆರೋಪಣೆ**

ಈ ಪ್ರಕರಣದಲ್ಲಿ ಆರೋಪಿತರಾದ ನೀವು ಫಿರ್ಯಾದುದಾರರ ಪರಿಚಯಸ್ಥರಾಗಿದ್ದು, ಫಿರ್ಯಾದುದಾರರನ್ನು ಭೇಟಿ ಮಾಡಿ ಕೈಸಾಲ ತೀರಿಸಲು ಹಣದ ಅವಶ್ಯಕತೆ ಇದೆಯೆಂದು ಫಿರ್ಯಾದುದಾರರಿಂದ ಹಣವನ್ನು ಸಾಲವಾಗಿ ನೀಡುವಂತೆ ಆಗಸ್ಟ್ ತಿಂಗಳಿನಲ್ಲಿ ಕೇಳಿ ರೂ.5,00,000/-ವನ್ನು ಪಡೆದು 6 ತಿಂಗಳ ವಾಯಿದೆಯೊಳಗಾಗಿ ಹಿಂತಿರುಗಿಸುವುದಾಗಿ ಒಪ್ಪಿಕೊಂಡಿರುತ್ತೀರಿ.

ತದನಂತರ ಫಿರ್ಯಾದುದಾರರು ನಿಮ್ಮನ್ನು ಭೇಟಿಯಾಗಿ ಹಣವನ್ನು ಹಿಂತಿರುಗಿಸುವಂತೆ ಕೇಳಿಕೊಂಡಿದ್ದು ಆರೋಪಿಯಾದ ನೀವು ಆ ಚೆಕ್ಕನ್ನು ದಿನಾಂಕ 24.02.2023 ರ ಎಸ್ ಬಿ ಐ ಬ್ಯಾಂಕ್, ಕುಣಿಗಲ್ ಶಾಖೆ, ಕುಣಿಗಲ್ ತಾಲ್ಲೂಕು ಚೆಕ್ ನಂ.159547/ನ್ನು ರೂ.5,00,000/- (ಐದು ಲಕ್ಷ ರೂಪಾಯಿಗಳಿಗೆ ಮಾತ್ರ ) ನೀಡಿದ್ದು ಸದರಿ ಚಕ್ಕನ್ನು ಫಿರ್ಯಾದುದಾರರು, ಕುಣಿಗಲ್ ಶಾಖೆಯ ಎಸ್ ಬಿ ಐ ಬ್ಯಾಂಕ್ ಇಲ್ಲಿ ನಗದೀಕರಣಕ್ಕಾಗಿ ಸಲ್ಲಿಸಿದಾಗ, ಬ್ಯಾಂಕ್‌ನವರು 'Funds insufficient' ಎಂಬ ಹಿಂಬರಹದೊಂದಿಗೆ ಸದರಿ ಚೆಕ್ಕನ್ನು ದಿಃ 20.03.2023 ರಂದು ವಾಪಸ್ಸು ಕಳುಹಿಸಿರುತ್ತಾರೆ.

ನಂತರ ಪಿರ್ಯಾದಿಯು ಅವರ ವಕೀಲರಿಂದ ನೊಂದಾಯಿತ ಅಂಚೆ ಮೂಲಕ ದಿನಾಂಕಃ 04.04.2023 ರಂದು ನೋಟೀಸು ಕಳುಹಿಸಿರುತ್ತಾರೆ ಸದರಿ ನೋಟೀಸು ಆರೋಪಿಯಾದ ನಿಮಗೆ ಜಾರಿಯಾಗಿರುತ್ತದೆ. ಆರೋಪಿಯಾದ ನೀವು ಸದರಿ ಹಣವನ್ನು ಮರುಪಾವತಿ ಮಾಡದೇ, ನಿಮ್ಮ ಖಾತೆಯಲ್ಲಿ ಹಣ ಇಲ್ಲದೇ ಇದ್ದರೂ ಸಹ ಚೆಕ್ಕನ್ನು ನೀಡಿ ಫಿರ್ಯಾದುದಾರರಿಗೆ ಮೋಸ ಮಾಡಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು ಕಲಂಃ 138 ಎನ್.ಐ. ಆಕ್ಟ್ ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ ಮತ್ತು ಸದರಿ ಆರೋಪಣೆ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**ಆಪಾದನೆ (ಪ್ಲೀ)**

ಪ್ರಶ್ನೆಃ **1.ಈ ಮೇಲೆ ಓದಿ ಹೇಳಿದ ಆರೋಪಣೆ ನಿನಗೆ ತಿಳಿಯಿತೇ?**

ಆರೋಪಿಯ ಉತ್ತರಃ

ಪ್ರಶ್ನೆಃ 2. ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆ ಆಗಬೇಕೋ?

ಆರೋಪಿಯ ಉತ್ತರಃ

[ಈ ಆರೋಪಣೆಯನ್ನು ಈ ದಿನ ದಿನಾಂಕ 03.02.2025 ರಂದು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ]

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕುಣಿಗಲ್.